# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 120 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎಸ್ ನವೀನ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17.08.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ವಿದ್ಯಾರ್ಥಿನಿಲಯಗಳಿವೆ; (ಜಿಲ್ಲಾವಾರು ವಿವರ ಒದಗಿಸುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 1243 ಮೆಟ್ರಿಕ್ ಪೂರ್ವ ಹಾಗೂ 1469 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹೀಗೆ ಒಟ್ಟು 2712 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಆ) | ಪ್ರತಿ ವರ್ಷ ಎಷ್ಟು ಅರ್ಜಿಗಳು ವಿದ್ಯಾರ್ಥಿನಿಲಯಕ್ಕೆ ಬರುತ್ತಿದೆ; | ಕಳೆದ ಎರಡು ವರ್ಷಗಳಲ್ಲಿ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಾತಿ ಕೋರಿ ಸ್ವೀಕೃತವಾದ ಅರ್ಜಿಗಳು ಹಾಗೂ ಪ್ರವೇಶ ನೀಡಲಾದ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ. |
| ಇ) | ಕಳೆದ ಎರಡು ವರ್ಷಗಳಲ್ಲಿ ವಿದ್ಯಾರ್ಥಿನಿಲಯಗಳಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಲಾಗಿದೆ. | |

| ವಿದ್ಯಾರ್ಥಿ ನಿಲಯದ ವಿಧ | ಮಂಜೂರಾತಿ ಸಂಖ್ಯೆ | 2024-25 | | | |
|---|---|---|---|---|---|
| | | ಹೊಸದಾಗಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ನವೀಕರಣ | ಹೊಸದು | ಒಟ್ಟು |
| ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | 68783 | 36155 | 37737 | 28494 | 66231 |
| ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | 175033 | 194844 | 80648 | 86946 | 167594 |

| ವಿದ್ಯಾರ್ಥಿ ನಿಲಯದ ವಿಧ | ಮಂಜೂರಾತಿ ಸಂಖ್ಯೆ | 2025-26 | | | |
|---|---|---|---|---|---|
| | | ಹೊಸದಾಗಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ನವೀಕರಣ | ಹೊಸದು | ಒಟ್ಟು |
| ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | 67303 | 48082 | 37281 | 26835 | 64116 |
| ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | 183338 | 200530 | 94913 | 72733 | 167646 |

<table>
<tr>
<td>ಈ)</td>
<td>ಸದರಿ ವಿದ್ಯಾರ್ಥಿನಿಲಯಗಳಿಗೆ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆ ಯಾವ ರೀತಿಯಾಗಿ ಮಾಡಲಾಗುತ್ತಿದೆ;</td>
<td>ಹಿಂದುಳಿದ ವರ್ಗಗಳ ಇಲಾಖಾ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಾತಿಗೆ ಸರ್ಕಾರದ ಮಾರ್ಗಸೂಚಿಗಳ ಅನುಸಾರ ಶೇ.50ರಷ್ಟು ಸ್ಥಾನಗಳನ್ನು ಸ್ಥಳೀಯ ಜಿಲ್ಲೆಯ ವಿದ್ಯಾರ್ಥಿಗಳಿಗೆ ಮತ್ತು ಶೇ.50 ರಷ್ಟು ಸ್ಥಾನಗಳನ್ನು ಇತರೆ ಜಿಲ್ಲೆಯ ವಿದ್ಯಾರ್ಥಿಗಳಿಗೆ ಮೀಸಲಿರಿಸಿ, State Hostel Portalನಲ್ಲಿ ಆನ್ ಲೈನ್ ಮುಖಾಂತರ ತಾಲ್ಲೂಕುವಾರು ಅರ್ಜಿಗಳನ್ನು ಆಹ್ವಾನಿಸಿ ನಂತರ ತಾಲ್ಲೂಕು ಮಟ್ಟದಲ್ಲಿ ಮಾನ್ಯ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿಯ ಮೂಲಕ ವಿದ್ಯಾರ್ಥಿಗಳನ್ನು ಮೀಸಲಾತಿ ಮತ್ತು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ.</td>
</tr>
<tr>
<td>ಉ)</td>
<td>ಪ್ರತಿ ಒಬ್ಬ ವಿದ್ಯಾರ್ಥಿಗೆ ಸರ್ಕಾರ ಒಂದು ವರ್ಷಕ್ಕೆ ಎಷ್ಟು ಹಣ ಖರ್ಚು ಮಾಡುತ್ತಿದೆ?</td>
<td>ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್-ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರತಿ ನಿಲಯಾರ್ಥಿಗಳಿಗೆ ನೇರವಾಗಿ ವರ್ಷಕ್ಕೆ ಈ ಕೆಳಕಂಡಂತೆ ಖರ್ಚು ಮಾಡಲಾಗುತ್ತಿದೆ.<br>
<table>
<tr><td>ಖರ್ಚಿನ ಬಾಬ್ತು(ವಾರ್ಷಿಕ)</td><td colspan="2">ಮೆಟ್ರಿಕ್ ಪೂರ್ವ</td><td colspan="2">ಮೆಟ್ರಿಕ್ ನಂತರ</td></tr>
<tr><td></td><td>ಬಾಲಕರು</td><td>ಬಾಲಕಿಯರು</td><td>ಬಾಲಕರು</td><td>ಬಾಲಕಿಯರು</td></tr>
<tr><td>ಭೋಜನಾ ವೆಚ್ಚ</td><td>17500</td><td>17500</td><td>22200</td><td>22200</td></tr>
<tr><td>ನಿರ್ಮಲ/ಸಿರಿಗಂಧ ಕಿಟ್</td><td>1710</td><td>2300</td><td>2052</td><td>2760</td></tr>
<tr><td>ಕ್ಷೌರ ವೆಚ್ಚ</td><td>300</td><td>-</td><td>-</td><td>-</td></tr>
<tr><td>ಲೇಖನ ಸಾಮಾಗ್ರಿ</td><td>400</td><td>400</td><td>-</td><td>-</td></tr>
<tr><td>ಒಟ್ಟು</td><td>19910</td><td>20200</td><td>242052</td><td>24960</td></tr>
</table>
<br>
ಮುಂದುವರೆದು, ಪ್ರತಿ ವಿದ್ಯಾರ್ಥಿ ನಿಲಯದ ಎಲ್ಲಾ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ಒಟ್ಟಾರೆಯಾಗಿ ಈ ಕೆಳಕಂಡಂತೆ ಸಹ ಖರ್ಚು ಮಾಡಲಾಗುತ್ತದೆ.<br>
<br>
1. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಪ್ರಥಮ ಬಾರಿಗೆ ರೂ.50000/- ಹಾಗೂ ನಂತರದಲ್ಲಿ ಪ್ರತಿ ವರ್ಷಕ್ಕೆ ರೂ.5000/ಗಳ ಸುಸಜ್ಜಿತ ಗ್ರಂಥಾಲಯ ವ್ಯವಸ್ಥೆಯನ್ನು ಒದಗಿಸಲಾಗುತ್ತಿದೆ.<br>
2. ಮೆಟ್ರಿಕ್ ನಂತರದ ಸಾಮಾನ್ಯ ವಿದ್ಯಾರ್ಥಿನಿಲಯಗಳಿಗೆ ಪ್ರಥಮ ಬಾರಿಗೆ ರೂ.1.00 ಲಕ್ಷ ನಂತರದದಲ್ಲಿ ಪ್ರತಿ ವರ್ಷಕ್ಕೆ ರೂ.20000/-ಗಳಂತೆ ಹಾಗೂ ಮೆಟ್ರಿಕ್ ನಂತರದ ಸ್ನಾತಕೋತರ / ವೃತ್ತಿಪರ ವಿದ್ಯಾರ್ಥಿನಿಲಯಗಳಿಗೆ ಪ್ರಥಮ ಬಾರಿಗೆ ರೂ.1.25 ಲಕ್ಷ ನಂತರದದಲ್ಲಿ ಪ್ರತಿ ವರ್ಷಕ್ಕೆ ರೂ.30000/-ಗಳ ವೆಚ್ಚದಲ್ಲಿ ಸುಸಜ್ಜಿತ ಗ್ರಂಥಾಲಯದ ವ್ಯವಸ್ಥೆಯನ್ನು ಒದಗಿಸಲಾಗುತ್ತಿದೆ.<br>
3. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿಲಯಾರ್ಥಿಗಳಿಗೆ ರೂ. 5000/-ಗಳ ವೆಚ್ಚದಲ್ಲಿ ವಾರ್ತಾ ಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಒದಗಿಸಲಾಗುತ್ತಿದೆ.<br>
4. ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪ್ರತಿ ವರ್ಷಕ್ಕೆ, ರೂ.20000/-ಗಳ ವೆಚ್ಚದಲ್ಲಿ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸಲಾಗುತ್ತಿದೆ.:<br>
5. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸ್ವಚ್ಛತೆ ಮತ್ತು ಸ್ವಚ್ಛತಾ ಸಾಮಗ್ರಿಗಳಿಗಾಗಿ ಪ್ರತಿ ವಿದ್ಯಾರ್ಥಿ ನಿಲಯಕ್ಕೆ ಪ್ರತಿ ತಿಂಗಳಿಗೆ ರೂ.10000/-ಗಳಂತೆ ವೆಚ್ಚ ಮಾಡಲಾಗುತ್ತಿದೆ.</td>
</tr>
</table>

6. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ವೈದ್ಯಕೀಯ ಸೌಲಭ್ಯ ಒದಗಿಸಲು ಪ್ರತಿ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕವಾಗಿ ಈ ಕೆಳಕಂಡಂತೆ ವೆಚ್ಚವನ್ನು ನೀಡಲಾಗುತ್ತಿದೆ.

| | |
|---|---|
| 50 ಸಂಖ್ಯಾಬಲದ ವರೆಗೆ | ರೂ.5,000/- |
| 51 ಕ್ಕೂ ಮೇಲ್ಪಟ್ಟು | ರೂ.10,000/- |

7. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ವೈದ್ಯಕೀಯ ಸೌಲಭ್ಯ ಒದಗಿಸಲು ಪ್ರತಿ ವಿದ್ಯಾರ್ಥಿ ನಿಲಯಕ್ಕೆ ಪ್ರಥಮ ಚಿಕಿತ್ಸಾ ಪೆಟ್ಟಿಗೆಯೊಂದಿಗೆ ಬರುವ ಎಲ್ಲಾ ವಸ್ತುಗಳನ್ನು ನೀಡಲಾಗುತ್ತಿದೆ.
8. ಪ್ರತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ನಿಲಯಾರ್ಥಿಗಳಿಗೆ ಕಠಿಣ ವಿಷಯಗಳಿಗೆ ಗಣಿತ, ವಿಜ್ಞಾನ ಮತ್ತು ಇಂಗ್ಲೀಷ ಭಾಷೆಗಳನ್ನು ಅರೆಕಾಲಿಕ ಬೋಧಕರಿಂದ ಬೋಧಿಸಲಾಗುತ್ತಿದೆ.
9. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿನ ನಿಲಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮತ್ತು ವೃತ್ತಿ ಮಾರ್ಗದರ್ಶನಕ್ಕೆ ತರಬೇತಿ ಕಾರ್ಯಗಾರವನ್ನು ಆಯೋಜಿಸಲಾಗುತ್ತಿದೆ.

ಸಂಖ್ಯೆ:ಹಿಂವಕ **591** ಬಿಎಂಎಸ್ **2026**

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎಸ್.ನವೀನ್ ಇವರ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ:120ಕ್ಕೆ ಅನುಬಂಧ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಜಿಲ್ಲಾವಾರು ವಿವರ

| ಕ್ರ.ಸಂ | ಜಿಲ್ಲೆ | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು | | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು | | ಒಟ್ಟು ವಿದ್ಯಾರ್ಥಿನಿಲಯಗಳು | |
|---|---|---|---|---|---|---|---|
| | | ವಿದ್ಯಾರ್ಥಿನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ವಿದ್ಯಾರ್ಥಿನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | | |
| 1 | ಬಾಗಲಕೋಟೆ | 43 | 2840 | 49 | 6788 | 92 | 9628 |
| 2 | ಬಳ್ಳಾರಿ | 20 | 1215 | 35 | 4761 | 55 | 5976 |
| 3 | ಬೆಳಗಾವಿ | 99 | 5195 | 72 | 10000 | 171 | 15195 |
| 4 | ಬೆಂಗಳೂರು ಗ್ರಾಮಾಂತರ | 16 | 700 | 19 | 2119 | 35 | 2819 |
| 5 | ಬೆಂಗಳೂರು ನಗರ | 1 | 50 | 80 | 10497 | 81 | 10547 |
| 6 | ಬೀದರ | 38 | 2152 | 40 | 5115 | 78 | 7267 |
| 7 | ಚಾಮರಾಜನಗರ | 12 | 530 | 22 | 2528 | 34 | 3058 |
| 8 | ಚಿಕ್ಕಬಳ್ಳಾಪುರ | 31 | 1625 | 31 | 4138 | 62 | 5763 |
| 9 | ಚಿಕ್ಕಮಗಳೂರು | 56 | 2950 | 47 | 6306 | 103 | 9256 |
| 10 | ಚಿತ್ರದುರ್ಗ | 42 | 2255 | 67 | 8244 | 109 | 10499 |
| 11 | ದಕ್ಷಿಣ ಕನ್ನಡ | 21 | 1005 | 63 | 8026 | 84 | 9031 |
| 12 | ದಾವಣಗೆರೆ | 35 | 1875 | 56 | 7582 | 91 | 9457 |
| 13 | ಧಾರವಾಡ | 25 | 1195 | 73 | 9625 | 98 | 10820 |
| 14 | ಗದಗ | 32 | 1840 | 36 | 4755 | 68 | 6595 |
| 15 | ಹಾಸನ | 60 | 3150 | 60 | 8071 | 120 | 11221 |
| 16 | ಹಾವೇರಿ | 45 | 2395 | 40 | 5218 | 85 | 7613 |
| 17 | ಕಲಬುರಗಿ | 73 | 3930 | 65 | 8294 | 138 | 12224 |
| 18 | ಕೊಡಗು | 19 | 755 | 23 | 2450 | 42 | 3205 |
| 19 | ಕೋಲಾರ | 25 | 1346 | 36 | 3601 | 61 | 4947 |
| 20 | ಕೊಪ್ಪಳ | 42 | 2670 | 48 | 6274 | 90 | 8944 |
| 21 | ಮಂಡ್ಯ | 62 | 3350 | 54 | 6861 | 116 | 10211 |
| 22 | ಮೈಸೂರು | 41 | 1810 | 75 | 10110 | 116 | 11920 |
| 23 | ರಾಯಚೂರು | 36 | 2040 | 38 | 5088 | 74 | 7128 |
| 24 | ರಾಮನಗರ | 25 | 1058 | 28 | 3181 | 53 | 4239 |
| 25 | ಶಿವಮೊಗ್ಗ | 57 | 3091 | 84 | 11630 | 141 | 14721 |
| 26 | ತುಮಕೂರು | 57 | 2900 | 66 | 8411 | 123 | 11311 |
| 27 | ಉಡುಪಿ | 18 | 990 | 29 | 4094 | 47 | 5084 |
| 28 | ಉತ್ತರಕನ್ನಡ | 68 | 3826 | 37 | 4750 | 105 | 8576 |
| 29 | ವಿಜಯನಗರ | 36 | 2515 | 32 | 4395 | 68 | 6910 |
| 30 | ವಿಜಯಪುರ | 64 | 3610 | 41 | 5613 | 105 | 9223 |
| 31 | ಯಾದಗಿರಿ | 44 | 2390 | 23 | 2913 | 67 | 5303 |
| | ಒಟ್ಟು | 1243 | 67253 | 1469 | 191438 | 2712 | 258691 |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು